ಸಾಕ್ಷಿಯನ್ನು ದಿಃ**24.06.2025** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ 1 ಮತ್ತು 2 ನೇ ಪ್ರತಿವಾದಿ ಪರ ಶ್ರೀ ಎಸ್.ಬಿ.ಎಂ. ವಕೀಲರಿಂದಃ-**

ನನ್ನ ತಾತನ ಹೆಸರು ಮೋಟಾ ಬೋವಿ. ಕುನ್ನಾ ಬೋವಿ ಎಂಬುವವರು ನನ್ನ ತಾತ ಮೋಟಾ ಬೋವಿ ರವರ ತಮ್ಮ. ನನ್ನ ತಾತ ಮೋಟಾ ಬೋವಿ ರವರ ಹೆಸರಿನಲ್ಲಿ ಅಸ್ತಿ ಇತ್ತಾ ಎಂದರೆ ಸಾಕ್ಷಿ ಮೋಟಾ ಬೋವಿ ತಂದೆ ಮುದ್ದಾಬೋವಿ ರವರ ಹೆಸರಿಗೆ ಇದ್ದ ಆಸ್ತಿ ಅವರ ಹೆಸರಿಗೆ ಬಂದಿತ್ತು ಎನ್ನುತ್ತಾರೆ. ಈಗ ಹಾಜರು ಪಡಿಸಿರುವ ದಾಖಲೆಗಳು ಮುದ್ದಾಬೋವಿ ರವರ ಹೆಸರಿನಲ್ಲಿ ಇರುವ ದಾಖಲೆ ಆಗಿದೆ. ನಮ್ಮ ಊರಿನಲ್ಲಿ ಇರುವ ಚಿನ್ನಮ್ಮ ರವರು ನನಗೆ ಗೊತ್ತು. ಅವರಿಂದ ನಮ್ಮ ತಂದೆ ಯಾವುದೆ ಜಮೀನನ್ನು ಖರೀದಿಸಿಲ್ಲ. ಚಿನ್ನಮ್ಮ ರವರ ಗಂಡನ ಹೆಸರು ದಾಸಾ ಬೋವಿ, ಅವರು ನನ್ನ ತಂದೆಯ ದೊಡ್ಡಪ್ಪ.

ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿದ ನಿಪಿ. 6 ರಿಂದ 18 ರ ದಾಖಲೆಗಳು ದಾಸಾ ಬೋವಿ ರವರ ಹೆಸರಿನಲ್ಲಿ ಇವೆ ಎಂದರೆ ಸರಿ. ಸದರಿ ದಾಸಾ ಬೋವಿ ರವರ ಚಿನ್ನಮ್ಮ ನವರ ಗಂಡ ಎಂದರೆ ಸರಿ. ಈಗ ಹಾಜರು ಪಡಿಸಿದ ದಾಖಲೆಗಳು ಪಿತ್ರಾರ್ಜಿತ ಆಸ್ತಿಗಳಲ್ಲ ಅದರೂ ಅವುಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲು 3 ರಿಂದ 5 ನೇ ಪ್ರತಿವಾದಿ ಪರ ಶ್ರೀ ಸಿ.ಆರ್ ವಕೀಲರಿಂದಃ**

**ವಕೀಲರನ್ನು ಕೂಗಿ ಕರೆಯಿಸಲಾಗಿ ಗೈರು ಹಾಜರಿದ್ದು, ಅವರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.